



ಸಣ್ಣ ಹರಳಿನ ಪೆಂಡೆಂಟ್ ಬಹಳ ಆರಾಮ. ಇನ್ನು ಉದ್ದ, 32, 34 ಇಂಚು ಉದ್ದದ ಸರ ಹಾಕುವಾಗ ಕೆಲವರಿಗೆ ಕರಿಮಣಿ ಸರ ಅಗಲವಾಗಿ ನಿಲ್ಲಬೇಕು ಎನಿಸುತ್ತದೆ. ಆಗ ಅಗಲವಾದ ಪೆಂಡೆಂಟ್ ಧರಿಸಿ. ಪೆಂಡೆಂಟ್ ಸ್ವಲ್ಪ ಭಾರವಾಗಿರಲಿ, ಆಗ ಸರ ಚೆನ್ನಾಗಿ ಕುತ್ತಿಗೆಯಿಂದ ಕೆಳಗೆ ಸರಿಯಾಗಿ ನಿಲ್ಲುತ್ತದೆ.

ಒಂದೇ ಸರಕ್ಕೆ ಬೇರೆ ಬೇರೆ ಪೆಂಡೆಂಟ್ ಹಾಕಿ ಧರಿಸಬಹುದು. ಈ ಡೈಮಂಡ್ ಪೆಂಡೆಂಟ್ ಧರಿಸುವ ಕರಿಮಣಿ ಸರದಲ್ಲಿ ಚಿನ್ನದ ಗುಂಡು, ಬೇರೆ ಮಣಿಗಳ ಅಗತ್ಯವಿಲ್ಲ. ಕೇವಲ ಕರಿಮಣಿ ಮತ್ತು ಬಿಳಿ ಹೊಳಪಿನ ಡೈಮಂಡ್ ಹರಳುಗಳು ಎದ್ದು ಕಾಣಬೇಕು. ಶಾರ್ಟ್ ಕಂಠಿ ಧರಿಸುವಾಗ ನಿಮ್ಮ ಕುತ್ತಿಗೆಯ ಮೇಲೆ ಪೆಂಡೆಂಟ್ ನಿಲ್ಲುವಷ್ಟು ಉದ್ದವಿದ್ದರೆ ಸಾಕು.

ಡೈಮಂಡ್ ಪೆಂಡೆಂಟ್ ಜೊತೆ ರೂಬಿ ಅಥವಾ ಎಮರಾಲ್ಡ್ ಹರಳು ಧರಿಸಬಹುದು. ಯಾವುದೇ ವಿನ್ಯಾಸಗಳಿಲ್ಲದೆ ಕೇವಲ ಬಾರ್ಡರ್ ಸೀರೆಗಳಿಗೆ, ಈ ತರಹದ ಕರಿಮಣಿ ಸರ ತುಂಬಾ ಸೊಗಸಾಗಿರುತ್ತದೆ. ■

# ನವೀನ ಬ್ರೈಡಲ್ ಆಭರಣ

ಸಮಕಾಲೀನ ಟ್ರೆಂಡ್‌ಗೆ ಇಂಬು ಕೊಡುವ ಹೊಸ ವಿನ್ಯಾಸದ ವಜ್ರದ ಆಭರಣ ಎಂದರೆ ಅದು 'ಎವರ್‌ಗ್ರೀನ್ ಕ್ವೀನ್' ಇದ್ದ ಹಾಗೆ. ಮಿಂಚಿನಂತೆ ಮಿಂಚುವ, ಸಖತ್ ಗ್ರ್ಯಾಂಡ್ ಲುಕ್ ಕೊಡುವ ಡೈಮಂಡ್‌ಗೆ ಡಿಮಾಂಡ್ ಇದ್ದೇ ಇದೆ. ಹೊಳಪು, ಒನಪು, ವಿನ್ಯಾಸ ಮುಂತಾದ ವೈವಿಧ್ಯದಿಂದ ಮಹಿಳೆಯರನ್ನು ಥಟ್ಟನೆ ಸೆಳೆಯುತ್ತದೆ.

ವಜ್ರದೊಡವೆ ಬಹು ದುಬಾರಿ ಎನ್ನುವ ಕಾಲವೊಂದಿತ್ತು. ಆದರೆ ಈಗ ಹಗುರವಾದ ವಜ್ರದ ಆಭರಣ ಎಲ್ಲ ವರ್ಗದವರನ್ನೂ ಸೆಳೆಯುತ್ತಿದೆ. ಎಷ್ಟು ಬಳಸಿದರೂ ಅಂದಗೆಡದ, ಹಳತಾಗದ ವಜ್ರದ ಆಭರಣಗಳ ಕುಸುರಿ ಕೆಲಸ ಬಹು ಆಕರ್ಷಕ! ವಜ್ರದ ಒಡವೆ ಮೇಲೆ 'ಕಸ್ಟಮರ್ಸ್ ಫೋಕಸ್' ಇರುವುದರಿಂದ ಒಡವೆಪ್ರೇಮಿಗಳು ವಜ್ರದ ಆಭರಣದ ಮೊರೆ ಹೋಗಿದ್ದಾರೆ.

'ಡೈಮಂಡ್ ಒಡವೆಯಲ್ಲಿ ಮದುವೆ ಹೆಣ್ಣಿಗೆ ಅತ್ಯಂತ ಸೂಕ್ತವಾದ ಆಭರಣ ಎಂದರೆ ಅದು 'ಸ್ಪಾರ್ಕ್ಲಿಂಗ್ ಡೈಮಂಡ್'. ವಜ್ರ ಮತ್ತು ಎಮರಾಲ್ಡ್‌ಗಳನ್ನು ಬಳಸಿ ವಿನ್ಯಾಸ ಮಾಡುವ ಈ ಒಡವೆ ಕ್ಲಾಸಿಕ್ ಫ್ಯಾಷನ್ ಆಗಿದೆ. ಇದರಲ್ಲಿ ನೆಕ್ಲೇಸ್ ಮತ್ತು ಜುಮ್ಕಾಗಳು ಸಹ ಲಭ್ಯವಿದ್ದು, ಕೆಂಪು, ನೇರಳೆ ಮತ್ತು ಹೊನ್ನಿನ ಬಣ್ಣದ ಸೀರೆಗೆ ಚೆನ್ನಾಗಿ ಮ್ಯಾಚ್ ಆಗುತ್ತದೆ' ಎಂದು ಹೇಳುತ್ತಾರೆ ಮಂಗಳೂರಿನ ಒಡವೆ ವರ್ತಕರಾದ ಶಾಂತಾರಾಮ್ ಕಾಮತ್.

'ವಜ್ರ ಖರೀದಿಸುವಾಗ ಉತ್ಕೃಷ್ಟ ಗುಣಮಟ್ಟದ ವಜ್ರದ ಒಡವೆಗಳನ್ನೇ ಕೊಂಡುಕೊಳ್ಳಿ. ಹಗುರವಾದ, ಗ್ರ್ಯಾಂಡ್ ಲುಕ್ ಕೊಡುವ ಡೈಮಂಡ್ ಒಡವೆಗಳು 10 ಸಾವಿರದಿಂದ ಐದು ಲಕ್ಷದವರೆಗೂ ವಿವಿಧ ಶ್ರೇಣಿಯಲ್ಲಿವೆ. ಮಧ್ಯಮ ವರ್ಗದವರೂ ವಜ್ರದ ಆಭರಣ ಧರಿಸಬೇಕು ಎಂಬ ಕಾರಣಕ್ಕಾಗಿ ಈ ಎಲ್ಲ ಶ್ರೇಣಿಯ ಆಭರಣಗಳನ್ನು ಮಳಿಗೆಯಲ್ಲಿ ಇಡಲಾಗಿದೆ' ಎನ್ನುತ್ತಾರೆ ಅವರು.

'ಮದುವೆ, ಮುಂಜಿ, ಹಬ್ಬ ಮುಂತಾದ ಶುಭ ಸಮಾರಂಭಗಳಲ್ಲಿ ರೇಷ್ಮೆ ಸೀರೆಗೆ ಮ್ಯಾಚಿಂಗ್ ಆದ ವಜ್ರದ ಒಡವೆ ಧರಿಸಿಕೊಳ್ಳಬೇಕು ಎಂದು ಬಯಸುವ ಮಹಿಳೆಯರಿಗಾಗಿಯೇ 'ಕಲರ್ ಚೇಂಜಿಂಗ್ ಡೈಮಂಡ್ ಜ್ಯುವೆಲ್ಲರಿ' ಕೂಡ ಇದೆ. ಉಡುಪಿನ ಬಣ್ಣಕ್ಕೆ ಮ್ಯಾಚಿಂಗ್ ಆಗುವ ಹಾಗೆ ಡೈಮಂಡ್ ಹರಳುಗಳನ್ನು ಬದಲಾಯಿಸಿ ತೊಟ್ಟುಕೊಳ್ಳಬಹುದು. 'ಮಿಕ್ಸ್ ಅಂಡ್ ಮ್ಯಾಚ್' ಪರಿಕಲ್ಪನೆಗೆ ಅತ್ಯಂತ ಸೂಕ್ತವಾಗಿವೆ ಈ ಒಡವೆ' ಎಂದು ಹೇಳುತ್ತಾರೆ ಈ ಒಡವೆ ವರ್ತಕ.

'ನಾವೀನ್ಯತೆಯಿಂದ ಕೂಡಿದ ವೈವಿಧ್ಯಮಯ ಬ್ರೈಡಲ್ ಆಭರಣಗಳು ಮತ್ತು ಸಮಕಾಲೀನ ಆಭರಣಗಳು ಕರಕುಶಲಕರ್ಮಿಗಳಿಂದ ತಯಾರಿಸಲ್ಪಟ್ಟಿದೆ. ಇದು ಫ್ಯಾಷನಬಲ್ ಆಗಿಯೂ ಇರುವ ಕಾರಣ ಇಂಥ ಆಭರಣಕ್ಕೆ ಬೇಡಿಕೆ ಹೆಚ್ಚಿದೆ ಎಂಬುದು ಇವರ ಅಭಿಪ್ರಾಯ.

ಮದುಮಗಳಿಗಾಗಿಯೇ ವಿನ್ಯಾಸಗೊಳಿಸಿದ ಸ್ಪಾರ್ಕ್ಲಿಂಗ್ ಡೈಮಂಡ್ ಅತ್ಯಂತ ಹೊಳಪು ಇರುವ ಒಡವೆ. ಇದರಲ್ಲಿ ನೆಕ್ಲೇಸ್, ಜುಮ್ಕಾ, ಉಂಗುರಗಳಿದ್ದು, ವಜ್ರ ಮತ್ತು ಎಮರಾಲ್ಡ್‌ಗಳಲ್ಲಿ ವಿನ್ಯಾಸಗೊಳಿಸಲಾಗಿದೆ. ಇದೊಂದು ಕ್ಲಾಸಿಕ್ ಫ್ಯಾಷನ್ ಆಭರಣ.

ವಜ್ರದಲ್ಲಿ ಸ್ಟೇಟ್‌ಮೆಂಟ್ ಪೀಸ್ ಆಭರಣಗಳೂ ಲಭ್ಯ. ಇದರಲ್ಲಿ ತೋಳ್ಬಂದಿ ಹಾಗೂ ಹೊಳಪುಳ್ಳ ಹರಳುಗಳಿಂದ ಕೂಡಿದ ಸೊಂಟದ ಪಟ್ಟಿ ಸೇರಿದೆ.

■ **ಉಷಾರಾಣಿ ಎಂ.ಎಸ್.**

